# ಕರ್ನಾಟಕ ಸರ್ಕಾರ

**ಸಂಖ್ಯೆ:ಎಫ್‌ಡಿ 17 ಎಸ್‌ಆರ್‌ಪಿ 2007** **ಕರ್ನಾಟಕ ಸರ್ಕಾರದ ಸಚಿವಾಲಯ,**
**ವಿಧಾನ ಸೌಧ,**
**ಬೆಂಗಳೂರು, ದಿನಾಂಕ: 16ನೇ ಮೇ 2007.**

## ಅಧಿಸೂಚನೆ

ಕರ್ನಾಟಕ ರಾಜ್ಯ ನಾಗರಿಕ ಸೇವಾ ಅಧಿನಿಯಮ, 1978ರ (1990ನೇ ಕರ್ನಾಟಕ ಅಧಿನಿಯಮದ ಸಂಖ್ಯೆ: 14) ಪ್ರಕರಣ 3ರ ಉಪ-ಪ್ರಕರಣ (2)ರ ಪರಂತುಕದೊಡನೆ ಓದಿಕೊಂಡ, ಸದರಿ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ರಾಜ್ಯ ಸರ್ಕಾರವು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸಿದೆ; ಎಂದರೆ:-

1. **ಚಿಕ್ಕ ಹೆಸರು ಮತ್ತು ಪ್ರಾರಂಭ:-** (1) ಈ ನಿಯಮಗಳನ್ನು ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳು, 2007 ಎಂದು ಕರೆಯತಕ್ಕದ್ದು.

(2) ಅವು 2005ರ ಜುಲೈ ಮೊದಲನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. **ಅನ್ವಯ:-** (1) ಈ ನಿಯಮಗಳಿಂದ ಅಥವಾ ಇವುಗಳ ಮೇರೆಗೆ ಅನ್ಯಥಾ ಉಪಬಂಧಿಸದ ಹೊರತು, ಈ ನಿಯಮಗಳು ಸರ್ಕಾರಿ ಸೇವೆಗಳಿಗೆ ಮತ್ತು ಕರ್ನಾಟಕ ರಾಜ್ಯದ ವ್ಯವಹಾರಗಳ ಸಂಬಂಧದಲ್ಲಿನ ಹುದ್ದೆಗಳಿಗೆ ನೇಮಕಗೊಂಡ ವ್ಯಕ್ತಿಗಳಿಗೆ ಅನ್ವಯಿಸತಕ್ಕದ್ದು.

(2) ಈ ನಿಯಮಗಳು ಈ ಕೆಳಗಿನವರಿಗೆ ಅನ್ವಯಿಸತಕ್ಕದ್ದಲ್ಲ:-

(ಅ) ಸರ್ಕಾರವು ಹೊರಡಿಸಿದ ಆದೇಶದ ಮೂಲಕ ಅನ್ಯಥಾ ಉಪಬಂಧಿಸದ ಹೊರತು, ಸರ್ಕಾರಿ ಸೇವೆಗಳ ನಿಯತ ಸಿಬ್ಬಂದಿ ವರ್ಗದಲ್ಲಿನ ಯಾವುದೇ

ಹುದ್ದೆಯ ಮೇಲೆ ಧಾರಣಾಧಿಕಾರ ಹೊಂದಿಲ್ಲದ ಕಾಮಗಾರಿ ಹಣದಿಂದ ಸಂಬಳ ಪಡೆಯುವ ಸಿಬ್ಬಂದಿ ವರ್ಗಕ್ಕೆ ಸೇರಿದ ವ್ಯಕ್ತಿಗಳಿಗೆ;

(ಆ) ಸರ್ಕಾರವು ಹೊರಡಿಸಿದ ಆದೇಶದ ಮೂಲಕ ಅನ್ಯಥಾ ಉಪಬಂಧಿಸದ ಹೊರತು, ಸಾದಿಲ್ವಾರು ನಿಧಿಗಳಿಂದ ಸಂಬಳ ನೀಡಲಾಗುವ ವ್ಯಕ್ತಿಗಳಿಗೆ;

(ಇ) ಗಂಟೆ, ದಿನ, ವಾರ ಅಥವಾ ಮಾಸಿಕ ದರಗಳ ಆಧಾರದ ಮೇಲೆ ಮಜೂರಿಗಳನ್ನು ನೀಡಲಾಗುವ ವ್ಯಕ್ತಿಗಳಿಗೆ;

(ಈ) ಪೂರ್ಣಕಾಲಿಕ ಉದ್ಯೋಗದಲ್ಲಿರದ ವ್ಯಕ್ತಿಗಳಿಗೆ;

(ಉ) ಚಿಲ್ಲರೆ ಕೆಲಸದ ದರದ ಆಧಾರದ ಮೇಲೆ ಮಜೂರಿ ನೀಡಲಾಗುವ ವ್ಯಕ್ತಿಗಳಿಗೆ;

(ಊ) ಕರಾರಿನಲ್ಲಿ ಅನ್ಯಥಾ ಉಪಬಂಧಿಸಲಾಗಿದ್ದ ಹೊರತು, ಕರಾರು ಆಧಾರದ ಮೇಲೆ ನೇಮಕಗೊಂಡ ವ್ಯಕ್ತಿಗಳಿಗೆ;

(ಋ) ಸಂಚಿತ ವೇತನ ಅಥವಾ ಸಂಬಳದ ಆಧಾರದ ಮೇಲೆ ನೇಮಕಗೊಂಡ ವ್ಯಕ್ತಿಗಳಿಗೆ;

(ೠ) ನಿವೃತ್ತಿ ನಂತರ ಸರ್ಕಾರಿ ಸೇವೆಗಳಲ್ಲಿ ಮರುನೇಮಕಗೊಂಡ ವ್ಯಕ್ತಿಗಳಿಗೆ;

(ಎ) ಭಾರತ ಸಂವಿಧಾನದ 187ನೇ ಅನುಚ್ಛೇದದ (3)ನೇ ಖಂಡ, 229ನೇ ಅನುಚ್ಛೇದದ (2)ನೇ ಖಂಡದ ಅಥವಾ 318ನೇ ಅನುಚ್ಛೇದದ (ಬಿ) ಉಪಖಂಡದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ಯಾವ ವ್ಯಕ್ತಿಗಳ ಸೇವಾ ಷರತ್ತುಗಳನ್ನು ಕ್ರಮಬದ್ಧಗೊಳಿಸಲಾಗಿದೆಯೋ ಆ ವ್ಯಕ್ತಿಗಳಿಗೆ;

(ಏ) ಯು.ಜಿ.ಸಿ/ಎ.ಐ.ಸಿ.ಟಿ.ಇ/ಐ.ಸಿ.ಎ.ಆರ್ ವೇತನ ಶ್ರೇಣಿಗಳಲ್ಲಿ ವೇತನ ಪಡೆಯುತ್ತಿರುವ ವ್ಯಕ್ತಿಗಳಿಗೆ;

(ಐ) ಸರ್ಕಾರದ ಅಧೀನದಲ್ಲಿ ಕಾರ್ಯನಿರ್ವಹಿಸುವ ಅಖಿಲ ಭಾರತ ಸೇವೆಗಳಿಗೆ ಸೇರಿದ ವ್ಯಕ್ತಿಗಳಿಗೆ;

(ಒ) ಪ್ರಥಮ ರಾಷ್ಟ್ರೀಯ ನ್ಯಾಯಿಕ ವೇತನ ಆಯೋಗದ ವೇತನ ಶ್ರೇಣಿಗಳಲ್ಲಿ ವೇತನ ಪಡೆಯುತ್ತಿರುವ ರಾಜ್ಯ ನ್ಯಾಯಾಂಗ ಸೇವೆಗೆ ಸೇರಿದ ಅಧಿಕಾರಿಗಳು; ಮತ್ತು

(ಓ) ಸರ್ಕಾರವು, ಆದೇಶದ ಮೂಲಕ, ಈ ನಿಯಮಗಳ ಎಲ್ಲಾ ಅಥವಾ ಯಾವುದೇ ಉಪಬಂಧಗಳ ಪ್ರವರ್ತನೆಯಿಂದ ನಿರ್ದಿಷ್ಟವಾಗಿ ಹೊರತುಪಡಿಸಬಹುದಾದ ಯಾವುದೇ ಇತರ ವರ್ಗ ಅಥವಾ ಪ್ರವರ್ಗದ ವ್ಯಕ್ತಿಗಳಿಗೆ.

3. **ಪರಿಭಾಷೆಗಳು:–** ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸದ ಹೊರತು:–

(ಅ) 'ಮೂಲ ವೇತನ' ಎಂದರೆ ಸರ್ಕಾರಿ ನೌಕರನು 'ಪ್ರಸಕ್ತ ಶ್ರೇಣಿ'ಯಲ್ಲಿ 2005ರ ಜುಲೈ 1 ರಂದು ಅಥವಾ ಆ ತರುವಾಯ ಯಾವುದೇ ದಿನಾಂಕದಂದು 'ಪರಿಷ್ಕೃತ ಶ್ರೇಣಿ' ಯಲ್ಲಿ ಅವನ ವೇತನವನ್ನು ಪುನ: ನಿಗದಿಪಡಿಸಲಾಗುವ ದಿನದಂದು ಅವನು ಪಡೆಯುತ್ತಿದ್ದ ಮೂಲ ವೇತನ ಮತ್ತು ಅದು ಈ ಮುಂದಿನವುಗಳನ್ನು ಒಳಗೊಳ್ಳುತ್ತದೆ, ಎಂದರೆ -

(i) ವಾರ್ಷಿಕ ವೇತನ ಬಡ್ತಿ;

(ii) ಪ್ರಸಕ್ತ ಶ್ರೇಣಿಯ ಗರಿಷ್ಠ ವೇತನಕ್ಕಿಂತ ಹೆಚ್ಚಿಗೆಯಾಗಿ ನೀಡಲಾದ ಸ್ಥಗಿತ ವೇತನ ಬಡ್ತಿ;

(iii) 1999ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ 7ನೇ ನಿಯಮದ (3)ನೇ ಉಪನಿಯಮದ ಮೇರೆಗೆ ನೀಡಲಾದ ವೈಯಕ್ತಿಕ ವೇತನ;

(iv) ಪ್ರಸಕ್ತ ಶ್ರೇಣಿಯ ಗರಿಷ್ಠ ವೇತನಕ್ಕಿಂತ ಹೆಚ್ಚಿಗೆಯಾಗಿ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 13 ಎಸ್‌ಆರ್‌ಪಿ 2002 ದಿನಾಂಕ 9–5–2002 ರನ್ವಯ ನೀಡಲಾದ ಹೆಚ್ಚುವರಿ ವೇತನ ಬಡ್ತಿ;

ಪರಂತು, ಅದು ಈ ಮುಂದಿನವುಗಳನ್ನು ಒಳಗೊಳ್ಳತಕ್ಕದ್ದಲ್ಲ; ಎಂದರೆ –

(i) ವಿಶೇಷ ಭತ್ಯೆ;

(ii) ಮೇಲೆ (iii) ರಲ್ಲಿ ನಮೂದಿಸಲಾದುದನ್ನು ಹೊರತುಪಡಿಸಿ ವೈಯಕ್ತಿಕ ವೇತನ;

(iii) ತಾಂತ್ರಿಕ ವೇತನ; ಮತ್ತು

(iv) ಕರ್ನಾಟಕ ನಾಗರಿಕ ಸೇವಾ ನಿಯಮಗಳ 8ನೇ ನಿಯಮದ ಉಪನಿಯಮ (32)ರ ಮೇರೆಗೆ, ಸರ್ಕಾರವು ವೇತನವೆಂದು ವಿಶೇಷವಾಗಿ ವರ್ಗೀಕರಿಸಿದ ಯಾವುದೇ ಇತರ ಉಪಲಬ್ಧಗಳು.

(ಆ) ಸರ್ಕಾರಿ ನೌಕರನಿಗೆ ಸಂಬಂಧಿಸಿದಂತೆ 'ಪ್ರಸಕ್ತ ಶ್ರೇಣಿ' ಎಂದರೆ ಖಾಯಂ ಅಥವಾ ಸ್ಥಾನಪನ್ನ ಅಥವಾ ತಾತ್ಕಾಲಿಕ ಸಾಮರ್ಥ್ಯದಲ್ಲಿ 2005ರ ಜುಲೈ 1ನೇ ದಿನಾಂಕದಂದು ಅವನು ಹೊಂದಿದ್ದ ಹುದ್ದೆಗೆ ಅನ್ವಯವಾಗುವ '1999ರ ಶ್ರೇಣಿ' ಮತ್ತು ಸದರಿ ಹುದ್ದೆಗೆ ಸಂಬಂಧಿಸಿದಂತೆ ಅವನಿಗೆ ಅನ್ವಯವಾಗುವ ವೈಯಕ್ತಿಕ ಶ್ರೇಣಿ, ಯಾವುದಾದರೂ ಇದ್ದಲ್ಲಿ, ಮತ್ತು ಸದರಿ ಹುದ್ದೆಗೆ ನೀಡಲಾದ 'ಪ್ರಸಕ್ತ ಆಯ್ಕೆಕಾಲಿಕ ಶ್ರೇಣಿ' ಅಥವಾ 'ಪ್ರಸಕ್ತ ಹಿರಿಯ ವೇತನ ಶ್ರೇಣಿ' ಇವುಗಳಲ್ಲಿ ಯಾವುದಾದರೊಂದನ್ನು ಅವನಿಗೆ ನೀಡಿದ್ದಲ್ಲಿ ಅದೂ ಒಳಗೊಳ್ಳುತ್ತದೆ.

(ಇ) ಒಂದು ಹುದ್ದೆಯನ್ನು ಧಾರಣ ಮಾಡಿರುವ ಸರ್ಕಾರಿ ನೌಕರನಿಗೆ ಸಂಬಂಧಿಸಿದಂತೆ 'ಪ್ರಸಕ್ತ ಆಯ್ಕೆಕಾಲಿಕ ವೇತನ ಶ್ರೇಣಿ' ಎಂದರೆ ಕಾಲಕಾಲಕ್ಕೆ ತಿದ್ದುಪಡಿಗೊಂಡ 1983ರ ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಬಡ್ತಿ) ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ಸದರಿ ಹುದ್ದೆಯ ಸಂಬಂಧದಲ್ಲಿ 2005ರ ಜುಲೈ 1ಕ್ಕೆ ಪೂರ್ವದಲ್ಲಿ ಅವನಿಗೆ ನೀಡಲಾದ ಆಯ್ಕೆಕಾಲಿಕ ವೇತನ ಶ್ರೇಣಿ;

(ಈ) ಒಂದು ಹುದ್ದೆಯನ್ನು ಧಾರಣ ಮಾಡಿರುವ ಸರ್ಕಾರಿ ನೌಕರನಿಗೆ ಸಂಬಂಧಿಸಿದಂತೆ 'ಪ್ರಸಕ್ತ ಹಿರಿಯ ವೇತನ ಶ್ರೇಣಿ' ಎಂದರೆ ಕಾಲಕಾಲಕ್ಕೆ ತಿದ್ದುಪಡಿಗೊಂಡ 1991ರ ಕರ್ನಾಟಕ ನಾಗರಿಕ ಸೇವಾ (ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಮುಂಬಡ್ತಿ ನೀಡುವಿಕೆ) ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ಸದರಿ ಹುದ್ದೆಯ

ಸಂಬಂಧದಲ್ಲಿ 2005ರ ಜುಲೈ 1ಕ್ಕೆ ಪೂರ್ವದಲ್ಲಿ ಅವನಿಗೆ ನೀಡಲಾದ ಹಿರಿಯ ವೇತನ ಶ್ರೇಣಿ;

(ಉ) 'ಸರ್ಕಾರ' ಎಂದರೆ ಕರ್ನಾಟಕ ಸರ್ಕಾರ;

(ಊ) ಒಂದು ಹುದ್ದೆಗೆ ಸಂಬಂಧಿಸಿದಂತೆ '1999ರ ಶ್ರೇಣಿ' ಎಂದರೆ 1999ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ಮೂಲಕ ಅಥವಾ ನಿಯಮಗಳ ಮೇರೆಗೆ ಆ ಹುದ್ದೆಗೆ ಗೊತ್ತುಪಡಿಸಲಾದ ವೇತನ ಶ್ರೇಣಿ;

(ಋ) ಒಂದು ಹುದ್ದೆಗೆ ಸಂಬಂಧಿಸಿದಂತೆ 'ಪರಿಷ್ಕೃತ ಶ್ರೇಣಿ' ಎಂದರೆ 4ನೇ ನಿಯಮದ (2)ನೇ ಉಪನಿಯಮದ ಮೇರೆಗೆ ಆ ಹುದ್ದೆಗೆ ಪ್ರತ್ಯೇಕವಾಗಿ ಪರಿಷ್ಕೃತ ಶ್ರೇಣಿಯನ್ನು ಅಧಿಸೂಚಿಸಿದ್ದ ಹೊರತು, ಮೊದಲನೇ ಅನುಸೂಚಿಯ ಭಾಗ-ಎ ರಲ್ಲಿನ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದಂತೆ ಅದಕ್ಕೆ ಅನ್ವಯವಾಗುವ 'ಪ್ರಸಕ್ತ ಶ್ರೇಣಿ'ಯ ಎದುರಿಗೆ ಅದರ (3)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ವೇತನ ಶ್ರೇಣಿ ಮತ್ತು ಅದರಲ್ಲಿ ಆ ಹುದ್ದೆಗೆ ಗೊತ್ತುಪಡಿಸಲಾದ 'ಪರಿಷ್ಕೃತ ಆಯ್ಕೆಕಾಲಿಕ ವೇತನ ಶ್ರೇಣಿ' ಮತ್ತು 'ಪರಿಷ್ಕೃತ ಹಿರಿಯ ವೇತನ ಶ್ರೇಣಿ', ಯಾವುದಾದರೂ ಇದ್ದರೆ, ಅದೂ ಸಹ ಸೇರುತ್ತದೆ;

(ೠ) ಹುದ್ದೆಯನ್ನು ಹೊಂದಿರುವ ಒಬ್ಬ ಸರ್ಕಾರಿ ನೌಕರನ ಸಂಬಂಧದಲ್ಲಿ 'ಪರಿಷ್ಕೃತ ಆಯ್ಕೆಕಾಲಿಕ ವೇತನ ಶ್ರೇಣಿ' ಎಂದರೆ 4ನೇ ನಿಯಮದ (3)ನೇ ಉಪ-ನಿಯಮದ ಮೂಲಕ ಗೊತ್ತುಪಡಿಸಲಾದ ಆಯ್ಕೆಕಾಲಿಕ ವೇತನ ಶ್ರೇಣಿ;

(ಎ) ಹುದ್ದೆಯನ್ನು ಹೊಂದಿರುವ ಒಬ್ಬ ಸರ್ಕಾರಿ ನೌಕರನ ಸಂಬಂಧದಲ್ಲಿ 'ಪರಿಷ್ಕೃತ ಹಿರಿಯ ವೇತನ ಶ್ರೇಣಿ' ಎಂದರೆ 4ನೇ ನಿಯಮದ (4)ನೇ ಉಪನಿಯಮದ ಮೂಲಕ ಗೊತ್ತುಪಡಿಸಲಾದ ಹಿರಿಯ ವೇತನ ಶ್ರೇಣಿ;

(ಏ) 'ಅನುಸೂಚಿ' ಎಂದರೆ ಈ ನಿಯಮಗಳಿಗೆ ಲಗತ್ತಿಸಲಾದ ಅನುಸೂಚಿ;

(ಐ) 'ಕೋಷ್ಠಕ' ಎಂದರೆ ಈ ನಿಯಮಗಳಿಗೆ ಲಗತ್ತಿಸಲಾದ ಕೋಷ್ಠಕ;

4. **ಹುದ್ದೆಗಳ ವೇತನ ಶ್ರೇಣಿ:–** (1) ಉಪ–ನಿಯಮ (2), (3) ಮತ್ತು (4)ರ ಉಪಬಂಧಗಳಿಗೊಳಪಟ್ಟು, ಈ ನಿಯಮಗಳ ಪ್ರಾರಂಭದ ದಿನಾಂಕದಿಂದ ಯಾವುದೇ ಹುದ್ದೆಗೆ ಅನ್ವಯವಾಗುವ ವೇತನ ಶ್ರೇಣಿಯು, ಮೊದಲನೇ ಅನುಸೂಚಿಯ ಭಾಗ–ಎ ರಲ್ಲಿನ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ, ಪ್ರಸಕ್ತ ಶ್ರೇಣಿಯ ಎದುರಿಗೆ ಅದರ (3)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ 'ಪರಿಷ್ಕೃತ ಶ್ರೇಣಿ' ಯಾಗಿರತಕ್ಕದ್ದು. ಮೊದಲನೇ ಅನುಸೂಚಿಯ ಭಾಗ–ಬಿ ದಲ್ಲಿ ನಿರ್ದಿಷ್ಟಪಡಿಸಿರುವ ಐದು ನೂತನ ವೇತನ ಶ್ರೇಣಿಗಳು ದಿನಾಂಕ 1ನೇ ಜುಲೈ 2005 ರಿಂದ ಇರತಕ್ಕದ್ದು.

(2) ಸರ್ಕಾರವು, ಯಾವುದೇ ಹುದ್ದೆಗೆ ಮೊದಲನೇ ಅನುಸೂಚಿಯ ಭಾಗ–ಎ ರಲ್ಲಿನ (3)ನೇ ಅಂಕಣದಲ್ಲಿ ಸಂವಾದಿ ನಮೂದಿನಲ್ಲಿ ನಿರ್ದಿಷ್ಟಪಡಿಸಿರುವ ಶ್ರೇಣಿಯಲ್ಲದ ಬೇರೊಂದು 'ಪರಿಷ್ಕೃತ ಶ್ರೇಣಿ'ಯನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚಿಸುವ ಮೂಲಕ, 2005ರ ಜುಲೈ 1 ರಿಂದ ಅಥವಾ ಸೂಕ್ತವೆಂದು ಭಾವಿಸಬಹುದಾದಂತಹ ಆನಂತರದ ದಿನಾಂಕದಿಂದ ಜಾರಿಗೆ ಬರುವಂತೆ ಮಂಜೂರು ಮಾಡಬಹುದು.

(3) ಈ ನಿಯಮಗಳು ಪ್ರಾರಂಭವಾದ ದಿನಾಂಕದಿಂದ, ಕಾಲಕಾಲಕ್ಕೆ ಪರಿಷ್ಕೃತಗೊಂಡ 1983ರ ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಬಡ್ತಿ) ನಿಯಮಗಳ ಉಪಬಂಧಗಳಿಗನುಗುಣವಾಗಿ, ಒಂದು ಹುದ್ದೆಯನ್ನು ಧಾರಣ ಮಾಡಿರುವ ಸರ್ಕಾರಿ ನೌಕರನಿಗೆ ಸಂಬಂಧಿಸಿದಂತೆ ದೊರೆಯುವ ಆಯ್ಕೆಕಾಲಿಕ ವೇತನ ಶ್ರೇಣಿಯು ಎರಡನೇ ಅನುಸೂಚಿಯ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿರುವಂತೆ ಹುದ್ದೆಗೆ ಅನ್ವಯವಾಗುವ 'ಪರಿಷ್ಕೃತ ವೇತನ ಶ್ರೇಣಿ'ಯ ಎದುರಿಗೆ (3)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ 'ಪರಿಷ್ಕೃತ ಆಯ್ಕೆಕಾಲಿಕ ವೇತನ ಶ್ರೇಣಿ' ಯಾಗಿರತಕ್ಕದ್ದು.

ಪರಂತು, ನೂತನ ಐದು ವೇತನ ಶ್ರೇಣಿಗಳನ್ನು ಜಾರಿಗೊಳಿಸಿದ ಪರಿಣಾಮವಾಗಿ, 1999ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ಮೇರೆಗೆ ವೇತನ ಶ್ರೇಣಿಯನ್ನು ಹೊಂದಿರುವ ಹುದ್ದೆಯನ್ನು ಧಾರಣ ಮಾಡಿರುವ ಸರ್ಕಾರಿ ನೌಕರನಿಗೆ ದಿನಾಂಕ 1ನೇ ಜುಲೈ 2005ರ ಪೂರ್ವದಲ್ಲಿ ಆಯ್ಕೆಕಾಲಿಕ ವೇತನ ಶ್ರೇಣಿಯನ್ನು ನೀಡಿದ್ದಲ್ಲಿ ಮತ್ತು ಆ ವೇತನ ಶ್ರೇಣಿಯ ಸಂವಾದಿಯಾಗಿ 1983ರ ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಬಡ್ತಿ) ನಿಯಮಗಳಡಿ ಪರಿಷ್ಕೃತ ಆಯ್ಕೆಕಾಲಿಕ ವೇತನ ಶ್ರೇಣಿಗಿಂತ ಹೆಚ್ಚಿನದಾಗಿದ್ದಲ್ಲಿ ಅಂತಹ 'ಪರಿಷ್ಕೃತ ಆಯ್ಕೆಕಾಲಿಕ ಶ್ರೇಣಿ' ಯನ್ನು ಅವನಿಗೆ ಅನ್ವಯಿಸುವಂತೆ ವೈಯಕ್ತಿಕವೆಂದು ನೀಡತಕ್ಕದ್ದು.

(4) ಈ ನಿಯಮಗಳು ಪ್ರಾರಂಭವಾದ ದಿನಾಂಕದಿಂದ, ಕಾಲಕಾಲಕ್ಕೆ ಪರಿಷ್ಕೃತಗೊಂಡ 1991ರ ಕರ್ನಾಟಕ ನಾಗರಿಕ ಸೇವಾ (ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಮುಂಬಡ್ತಿ ನೀಡುವಿಕೆ) ನಿಯಮಗಳ ಉಪಬಂಧಗಳಿಗನುಗುಣವಾಗಿ ಹುದ್ದೆಯನ್ನು ಧಾರಣ ಮಾಡಿರುವ ಸರ್ಕಾರಿ ನೌಕರನಿಗೆ ಸಂಬಂಧಿಸಿದಂತೆ ದೊರೆಯುವ ಹಿರಿಯ ವೇತನ ಶ್ರೇಣಿಯು, 1983ರ ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಬಡ್ತಿ) ನಿಯಮಗಳ ಮೇರೆಗೆ ಮಂಜೂರು ಮಾಡಿದ 'ಪರಿಷ್ಕೃತ ಆಯ್ಕೆ ಕಾಲಿಕ ವೇತನ ಶ್ರೇಣಿ'ಯ ನಂತರದ 'ಪರಿಷ್ಕೃತ ವೇತನ ಶ್ರೇಣಿ' ಆಗಿರುತ್ತದೆ ಅಥವಾ ಸರ್ಕಾರಿ ನೌಕರನು ಧಾರಣ ಮಾಡಿರುವ ಹುದ್ದೆಗೆ ಅನ್ವಯವಾಗುವಂತೆ 1983ರ ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಬಡ್ತಿ) ನಿಯಮಗಳಿಗನುಗುಣವಾಗಿ ಮಂಜೂರಾದ 'ಪರಿಷ್ಕೃತ ಆಯ್ಕೆಕಾಲಿಕ ವೇತನ ಶ್ರೇಣಿ' ಹಾಗೂ ಮುಂಬಡ್ತಿ ಹುದ್ದೆಯ 'ಪರಿಷ್ಕೃತ ವೇತನ ಶ್ರೇಣಿ'ಯೂ ಒಂದೇ ಆಗಿದ್ದಲ್ಲಿ ಅಥವಾ ಸರಿಸಮಾನವಾಗಿದ್ದಲ್ಲಿ, ಮುಂಬಡ್ತಿ ಹುದ್ದೆಯ 'ಪರಿಷ್ಕೃತ ವೇತನ ಶ್ರೇಣಿ' ಯಾಗಿರುತ್ತದೆ.

5. **'ಪರಿಷ್ಕೃತ ವೇತನ ಶ್ರೇಣಿ'ಯಲ್ಲಿ ವೇತನ ಪಡೆಯುವುದು:–** ಈ ನಿಯಮಗಳಲ್ಲಿ ಅನ್ಯಥಾ ಉಪಬಂಧಿಸಿದ ಹೊರತು, ಸರ್ಕಾರಿ ನೌಕರನು ತಾನು ಯಾವ ಹುದ್ದೆಗೆ ನಿಯೋಜಿತನಾಗಿರುವನೋ ಆ ಹುದ್ದೆಗೆ ಅನ್ವಯವಾಗುವ 'ಪರಿಷ್ಕೃತ ಶ್ರೇಣಿ' ಯಲ್ಲಿ ವೇತನವನ್ನು ಪಡೆಯತಕ್ಕದ್ದು.

6. **‘ಪರಿಷ್ಕೃತ ವೇತನ ಶ್ರೇಣಿ’ಯ ಅನ್ವಯ:–** ಈ ನಿಯಮಗಳ ಇತರ ಉಪಬಂಧಗಳಿಗೊಳಪಟ್ಟು ‘ಪರಿಷ್ಕೃತ ವೇತನ ಶ್ರೇಣಿ’ಯು –

(ಅ) 2005ರ ಜುಲೈ 1 ಕ್ಕೆ ಮುಂಚಿತವಾಗಿ ಸೇವೆಗೆ ಸೇರಿದ ಮತ್ತು ಆ ದಿನಾಂಕದಲ್ಲಿ ಸೇವೆಯಲ್ಲಿದ್ದ ಸರ್ಕಾರಿ ನೌಕರ;

(ಆ) 2005ರ ಜುಲೈ 1 ಕ್ಕೆ ಮುಂಚಿತವಾಗಿ ಪ್ರಸಕ್ತ ‘ಆಯ್ಕೆಕಾಲಿಕ ವೇತನ ಶ್ರೇಣಿ’ ಮಂಜೂರಾದಂಥ ಸರ್ಕಾರಿ ನೌಕರ;

(ಇ) 2005ರ ಜುಲೈ 1 ಕ್ಕೆ ಮುಂಚಿತವಾಗಿ ಪ್ರಸಕ್ತ ‘ಹಿರಿಯ ವೇತನ ಶ್ರೇಣಿ’ ಮಂಜೂರಾದಂಥ ಸರ್ಕಾರಿ ನೌಕರ;

(ಈ) 2005ರ ಜುಲೈ 1 ಕ್ಕೆ ಮುಂಚಿತವಾಗಿ ಅಥವಾ 2005ರ ಜುಲೈ 1 ರಂದು ಅಥವಾ ನಂತರ ತಾನು ಧಾರಣ ಮಾಡಿದ್ದ ಹುದ್ದೆಯಲ್ಲದ ಬೇರೊಂದು ಹುದ್ದೆಯ ಸೇವೆಗೆ ಸೇರಿದ ಅಥವಾ ಬಡ್ತಿ ಹೊಂದಿದ ಅಥವಾ ನೇಮಕಗೊಂಡ ಸರ್ಕಾರಿ ನೌಕರ;

(ಉ) 2005ರ ಜುಲೈ 1 ರಂದು ಅಥವಾ ನಂತರ ‘ಪರಿಷ್ಕೃತ ಆಯ್ಕೆಕಾಲಿಕ ವೇತನ ಶ್ರೇಣಿ’ ಯನ್ನು ಮಂಜೂರು ಮಾಡಬಹುದಾದಂತಹ ಸರ್ಕಾರಿ ನೌಕರ; ಮತ್ತು

(ಊ) 2005ರ ಜುಲೈ 1 ರಂದು ಅಥವಾ ನಂತರ ‘ಪರಿಷ್ಕೃತ ಹಿರಿಯ ವೇತನ ಶ್ರೇಣಿ’ ಯನ್ನು ಮಂಜೂರು ಮಾಡಬಹುದಾದಂತಹ ಸರ್ಕಾರಿ ನೌಕರನಿಗೆ ಅನ್ವಯವಾಗತಕ್ಕದ್ದು.

7. **‘ಪರಿಷ್ಕೃತ ವೇತನ ಶ್ರೇಣಿ’ ಯಲ್ಲಿ ಪ್ರಾರಂಭಿಕ ವೇತನವನ್ನು ನಿಗದಿಪಡಿಸುವುದು:–**

(1) 6ನೇ ನಿಯಮದ (ಅ), (ಆ) ಮತ್ತು (ಇ) ಖಂಡಗಳಲ್ಲಿ ಉಲ್ಲೇಖಿಸಿದಂಥ ಸರ್ಕಾರಿ ನೌಕರನ ಪ್ರಾರಂಭಿಕ ವೇತನವನ್ನು, ಸರ್ಕಾರವು ವಿಶೇಷ ಆದೇಶಗಳ ಮೂಲಕ ಅನ್ಯಥಾ ಆದೇಶಿಸದ ಹೊರತು, ಅವನಿಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಪ್ರತ್ಯೇಕವಾಗಿ ನಿಗದಿಗೊಳಿಸತಕ್ಕದ್ದು:–

(ಅ) 2005ರ ಜುಲೈ 1 ರಂದು ಅವನು ಧಾರಣ ಮಾಡಿದ್ದ ಹುದ್ದೆಗೆ ಸಂಬಂಧಿಸಿದಂತೆ; ಮತ್ತು

(ಆ) ಅವನು ಉನ್ನತ ಹುದ್ದೆಯನ್ನು ಸ್ಥಾನಪನ್ನವಾಗಿ ಧಾರಣ ಮಾಡಿರದಿದ್ದ ಪಕ್ಷದಲ್ಲಿ, ಆ ದಿನಾಂಕದಂದು ಅವನು ಧಾರಣ ಮಾಡಿರಬಹುದಾದಂಥ ಕೆಳಗಿನ ಹುದ್ದೆ ಯಾವುದಾದರೂ ಇದ್ದರೆ, ಅದಕ್ಕೆ ಸಂಬಂಧಿಸಿದಂತೆ.

(2) ಪ್ರಾರಂಭಿಕ ವೇತನವನ್ನು ನಾಲ್ಕನೇ ಅನುಸೂಚಿಯ (1)ನೇ ಅಂಕಣದಲ್ಲಿ ಕಂಡು ಬರುವ 'ಪ್ರಸಕ್ತ ಶ್ರೇಣಿ'ಯಲ್ಲಿನ ಅವನ 'ಮೂಲ ವೇತನ'ಕ್ಕೆ ಸಂವಾದಿಯಾಗಿ ಆ ಅನುಸೂಚಿಯ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿರುವ ಹಂತದಲ್ಲಿ ನಿಗದಿಗೊಳಿಸತಕ್ಕದ್ದು.

(3) ನಾಲ್ಕನೇ ಅನುಸೂಚಿಯ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ವೈಯಕ್ತಿಕ ವೇತನವನ್ನು ಬಡ್ತಿಯ ಮೇಲೆ ವೇತನವನ್ನು ನಿಗದಿಗೊಳಿಸುವುದು ಸೇರಿದಂತೆ ಎಲ್ಲಾ ಉದ್ದೇಶಗಳಿಗಾಗಿ ವೇತನ ಎಂದು ಪರಿಗಣಿಸತಕ್ಕದ್ದು.

(4) ಸರ್ಕಾರಿ ನೌಕರನೊಬ್ಬನ 'ಮೂಲ ವೇತನ'ವು ನಾಲ್ಕನೇ ಅನುಸೂಚಿಯ (1)ನೇ ಅಂಕಣದಲ್ಲಿ ಕಾಣಬರದಿದ್ದರೆ ಅಂಥ ಪ್ರಕರಣವನ್ನು ಆದೇಶಗಳಿಗಾಗಿ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(5) (ಅ) ಸರ್ಕಾರಿ ನೌಕರನು 2005ರ ಜುಲೈ 1 ರಂದು ಅಥವಾ ಆನಂತರ ಸೇವೆಗೆ ಸೇರಿದರೆ, ಅವನ ವೇತನವನ್ನು ಕರ್ನಾಟಕ ನಾಗರಿಕ ಸೇವಾ ನಿಯಮಗಳ ಉಪಬಂಧಗಳಿಗನುಗುಣವಾಗಿ ಅವನು ನೇಮಕವಾಗಿರುವಂಥ ಹುದ್ದೆಗೆ ಅನ್ವಯವಾಗುವ 'ಪರಿಷ್ಕೃತ ವೇತನ ಶ್ರೇಣಿ'ಯಲ್ಲಿ ನಿಗದಿಗೊಳಿಸತಕ್ಕದ್ದು.

(ಆ) ಸರ್ಕಾರಿ ನೌಕರನು 2005ರ ಜುಲೈ 1 ರಂದು ಅಥವಾ ಆನಂತರ ಆ ದಿನಾಂಕಕ್ಕೆ ಮುಂಚಿತವಾಗಿ ಅವನು ಧಾರಣ ಮಾಡಿರದ ಯಾವುದೇ ಹುದ್ದೆಗೆ ಬಡ್ತಿ ಹೊಂದಿದ್ದರೆ ಅಥವಾ ನೇಮಕವಾಗಿದ್ದರೆ ಅವನ ವೇತನವನ್ನು, ಈ ನಿಯಮದ (1) ರಿಂದ (4) ರ ವರೆಗಿನ ಉಪ-ನಿಯಮಗಳ ಉಪಬಂಧಗಳಿಗನುಗುಣವಾಗಿ 2005ರ ಜುಲೈ 1 ಕ್ಕೆ ಮುಂಚಿತವಾಗಿ ಅವನು ಧಾರಣ ಮಾಡಿದ್ದ ಹುದ್ದೆಗೆ ಅನ್ವಯವಾಗುವ 'ಪರಿಷ್ಕೃತ ಶ್ರೇಣಿ'ಯಲ್ಲಿ ನಿಗದಿಗೊಳಿಸತಕ್ಕದ್ದು ಮತ್ತು ಆನಂತರ, ಹಾಗೆ ನಿಗದಿಗೊಳಿಸಲಾದ ವೇತನದ ಆಧಾರದ ಮೇಲೆ, ಅವನ ವೇತನವನ್ನು

ಕರ್ನಾಟಕ ನಾಗರಿಕ ಸೇವಾ ನಿಯಮಗಳ ಉಪಬಂಧಗಳಿಗನುಗುಣವಾಗಿ ಅವನು ಬಡ್ತಿ ಹೊಂದಿದ ಅಥವಾ ನೇಮಕಗೊಂಡ ಹುದ್ದೆಗೆ ಅನ್ವಯವಾಗುವಂಥ ವೇತನ ಶ್ರೇಣಿಯಲ್ಲಿ ನಿಗದಿಗೊಳಿಸತಕ್ಕದ್ದು.

(6) ಸರ್ಕಾರಿ ನೌಕರನಿಗೆ 2005ರ ಜುಲೈ 1 ರಂದು ಅಥವಾ ಆನಂತರ 'ಆಯ್ಕೆಕಾಲಿಕ ಶ್ರೇಣಿ' ಅಥವಾ 'ಹಿರಿಯ ವೇತನ ಶ್ರೇಣಿ' ಮಂಜೂರಾಗಿದ್ದರೆ ಅವನು ಧಾರಣ ಮಾಡಿದ ಹುದ್ದೆಗೆ ಅನ್ವಯವಾಗುವ 'ಪರಿಷ್ಕೃತ ವೇತನ ಶ್ರೇಣಿ' ಯಲ್ಲಿನ ಅವನ ವೇತನವನ್ನು ಈ ನಿಯಮದ (1) ರಿಂದ (4)ರ ವರೆಗಿನ ಉಪ-ನಿಯಮಗಳ ಉಪಬಂಧಗಳಿಗನುಗುಣವಾಗಿ ನಿಗದಿಗೊಳಿಸತಕ್ಕದ್ದು ಮತ್ತು ಆನಂತರ, ಹಾಗೆ ನಿಗದಿಗೊಳಿಸಲಾದ ವೇತನದ ಆಧಾರದ ಮೇಲೆ, ಅವನ ವೇತನವನ್ನು ಆಯ್ಕೆಕಾಲಿಕ ವೇತನ ಶ್ರೇಣಿಯಲ್ಲಿ ಅಥವಾ ಹಿರಿಯ ವೇತನ ಶ್ರೇಣಿಯಲ್ಲಿ, ಸಂದರ್ಭಾನುಸಾರ, 1983ರ ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಬಡ್ತಿ) ನಿಯಮಗಳ 4ನೇ ನಿಯಮಕ್ಕನುಗುಣವಾಗಿ ಆಯ್ಕೆಕಾಲಿಕ ವೇತನ ಶ್ರೇಣಿಯಲ್ಲಿ ಅಥವಾ 1991ರ ಕರ್ನಾಟಕ ನಾಗರಿಕ ಸೇವೆಗಳು (ಹಿರಿಯ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಮುಂಬಡ್ತಿ ನೀಡುವಿಕೆ) ನಿಯಮಗಳ 7ನೇ ನಿಯಮಕ್ಕನುಗುಣವಾಗಿ ಹಿರಿಯ ವೇತನ ಶ್ರೇಣಿಯಲ್ಲಿ ನಿಗದಿಗೊಳಿಸತಕ್ಕದ್ದು.

(7) ಈ ನಿಯಮದ (2) ಅಥವಾ (4) ನೇ ಉಪ-ನಿಯಮದ ಮೇರೆಗಿನ ವೇತನ ನಿಗದಿಯಲ್ಲಿ, 2005ರ ಜುಲೈ 1 ರ ನಿಕಟಪೂರ್ವದಲ್ಲಿ ಅದೇ ಪದ ವೃಂದದಲ್ಲಿ ತನಗಿಂತ ಕಿರಿಯನಾಗಿರುವ ಸರ್ಕಾರಿ ನೌಕರನ ವೇತನಕ್ಕಿಂತ ಹೆಚ್ಚಿನ ವೇತನವನ್ನು ಪಡೆಯುತ್ತಿದ್ದ ಒಬ್ಬ ಸರ್ಕಾರಿ ನೌಕರನ ವೇತನವು ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕಿರಿಯ ಸರ್ಕಾರಿ ನೌಕರನ ವೇತನಕ್ಕಿಂತ ಕೆಳಗಿನ ಹಂತಕ್ಕೆ ನಿಗದಿಯಾಗಿದ್ದರೆ, ಅವನ ವೇತನವನ್ನು ಆ ಕಿರಿಯ ನೌಕರನು ಪರಿಷ್ಕೃತ ವೇತನ ಶ್ರೇಣಿಯಲ್ಲಿ ಪಡೆಯುತ್ತಿರುವ ವೇತನದ ಹಂತಕ್ಕೆ ಏರಿಸತಕ್ಕದ್ದು.

(8) 2005ರ ಜುಲೈ 1 ಕ್ಕೆ ಮುಂಚಿತವಾಗಿ ಉನ್ನತ ಹುದ್ದೆಗೆ ಬಡ್ತಿ ಹೊಂದಿದ ಹಿರಿಯ ಸರ್ಕಾರಿ ನೌಕರನು ಪರಿಷ್ಕೃತ ವೇತನ ಶ್ರೇಣಿಯಲ್ಲಿ, 2005ರ ಜುಲೈ 1 ರಂದು ಅಥವಾ ಆನಂತರ ಉನ್ನತ ಹುದ್ದೆಗೆ ಬಡ್ತಿ ಹೊಂದಿದ ತನ್ನ ಕಿರಿಯ ನೌಕರನ ವೇತನಕ್ಕಿಂತ ಕಡಿಮೆ ವೇತನ ಪಡೆಯುತ್ತಿದ್ದರೆ, ಹಿರಿಯ ಸರ್ಕಾರಿ ನೌಕರನ ವೇತನವನ್ನು ಉನ್ನತ ಹುದ್ದೆಯಲ್ಲಿ ಅವನ ಕಿರಿಯ

ನೌಕರನಿಗೆ ನಿಗದಿಗೊಳಿಸುವ ವೇತನಕ್ಕೆ ಸಮನಾದ ಮೊತ್ತಕ್ಕೆ ಏರಿಸತಕ್ಕದ್ದು. ಈ ರೀತಿ ವೇತನ ಏರಿಕೆಯನ್ನು ಕಿರಿಯ ಸರ್ಕಾರಿ ನೌಕರನು ಬಡ್ತಿ ಹೊಂದಿದ ದಿನಾಂಕದಿಂದ ಜಾರಿಗೆ ಬರುವಂತೆ, ಈ ಮುಂದಿನ ಷರತ್ತುಗಳನ್ನು ಈಡೇರಿಸುವುದಕ್ಕೊಳಪಟ್ಟು, ಮಾಡತಕ್ಕದ್ದು, ಎಂದರೆ:-

(ಅ) ಅವರ ಬಡ್ತಿಗೆ ಮುನ್ನ, ಹಿರಿಯ ಮತ್ತು ಕಿರಿಯ ಸರ್ಕಾರಿ ನೌಕರರು ಧಾರಣ ಮಾಡಿರುವ ಹುದ್ದೆಗಳು ಒಂದೇ ಪದ ವೃಂದಕ್ಕೆ ಸೇರಿರಬೇಕು ಮತ್ತು ಅವರು ಬಡ್ತಿ ಹೊಂದಿದ ಹುದ್ದೆಗಳು ಒಂದೇ ಪದ ವೃಂದಕ್ಕೆ ಸೇರಿರತಕ್ಕದ್ದು;

(ಆ) ಅವರು ವೇತನ ಪಡೆಯಲು ಅರ್ಹರಾಗಿರುವಂಥ ಕೆಳಗಿನ ಮತ್ತು ಉನ್ನತ ಹುದ್ದೆಗಳ ಪ್ರಸಕ್ತ ವೇತನ ಶ್ರೇಣಿ ಮತ್ತು ಪರಿಷ್ಕೃತ ವೇತನ ಶ್ರೇಣಿ ಸರಿಸಮಾನವಾಗಿರತಕ್ಕದ್ದು;

(ಇ) ಕಿರಿಯ ಸರ್ಕಾರಿ ನೌಕರನು ಕೆಳಗಿನ ಹುದ್ದೆಯ ಪ್ರಸಕ್ತ ವೇತನ ಶ್ರೇಣಿಯಲ್ಲಿ ಹಿರಿಯ ಸರ್ಕಾರಿ ನೌಕರನಿಗಿಂತ ಹೆಚ್ಚು ವೇತನವನ್ನು ಪಡೆದಿರಬಾರದು; ಮತ್ತು

(ಈ) 'ಪರಿಷ್ಕೃತ ವೇತನ ಶ್ರೇಣಿ'ಯಲ್ಲಿ ಅಂಥ ಬಡ್ತಿಯಿಂದಾಗಿ ವೇತನ ನಿಗದಿಯನ್ನು ಕ್ರಮಬದ್ಧಗೊಳಿಸುವ ಕರ್ನಾಟಕ ನಾಗರಿಕ ಸೇವಾ ನಿಯಮಗಳು ಅಥವಾ ಯಾವುದೇ ಇತರ ನಿಯಮ ಅಥವಾ ಆದೇಶದ ಅನ್ವಯದ ನೇರ ಪರಿಣಾಮದಿಂದಾಗಿ ಅಂಥ ತಾರತಮ್ಯ ಉಂಟಾಗಿದ್ದಿರಬೇಕು.

**8. 'ಪರಿಷ್ಕೃತ ವೇತನ ಶ್ರೇಣಿ'ಯಲ್ಲಿ ಮುಂದಿನ ವಾರ್ಷಿಕ ವೇತನ ಬಡ್ತಿಯ ದಿನಾಂಕ:-**

(1) ಸರ್ಕಾರಿ ನೌಕರನ ಪ್ರಾರಂಭಿಕ ವೇತನವನ್ನು 7ನೇ ನಿಯಮದ (1) ರಿಂದ (4) ರ ವರೆಗಿನ ಉಪ-ನಿಯಮಗಳ ಉಪಬಂಧಗಳಿಗನುಗುಣವಾಗಿ 2005ರ ಜುಲೈ 1 ರಿಂದ ಜಾರಿಗೆ ಬರುವಂತೆ 'ಪರಿಷ್ಕೃತ ವೇತನ ಶ್ರೇಣಿ'ಯಲ್ಲಿ ನಿಗದಿಗೊಳಿಸಿದ ಆನಂತರ, ಅದರ ಮುಂದಿನ ವಾರ್ಷಿಕ ವೇತನ ಬಡ್ತಿಯು, ಅವನು 'ಪ್ರಸಕ್ತ ವೇತನ ಶ್ರೇಣಿ'ಯಲ್ಲಿಯೇ ಮುಂದುವರಿದಿದ್ದರೆ 'ಪ್ರಸಕ್ತ ವೇತನ ಶ್ರೇಣಿ'ಯಲ್ಲಿ ಅವನಿಗೆ ಯಾವಾಗ ವೇತನ ಬಡ್ತಿಯು ಪ್ರಾಪ್ತವಾಗುತ್ತಿತ್ತೋ ಆ ದಿನಾಂಕದಂದು ಪ್ರಾಪ್ತವಾಗತಕ್ಕದ್ದು ಮತ್ತು ಸರ್ಕಾರ ಹೊರಡಿಸುವಂಥ ನಿಯಮಗಳು ಅಥವಾ ಸಾಮಾನ್ಯ ಅಥವಾ

ವಿಶೇಷ ಆದೇಶಗಳ ಮೇರೆಗೆ ಅವನಿಗೆ ಬರಬೇಕಾಗಿರುವ ಮತ್ತು ದೊರೆಯುವಂಥ ಯಾವುದೇ ಸ್ಥಗಿತ ವೇತನ ಬಡ್ತಿ ಸದರಿ ನಿಯಮಗಳು ಅಥವಾ ಆದೇಶಗಳಿಗನುಗುಣವಾಗಿ 'ಪರಿಷ್ಕೃತ ವೇತನ ಶ್ರೇಣಿ'ಯಲ್ಲಿ ಮಂಜೂರು ಮಾಡತಕ್ಕದ್ದು;

ಪರಂತು ಸರ್ಕಾರಿ ನೌಕರನಿಗೆ ವಾರ್ಷಿಕ ವೇತನ ಬಡ್ತಿ/ಸ್ಥಗಿತ ವೇತನ ಬಡ್ತಿ, 'ಪ್ರಸಕ್ತ ವೇತನ ಶ್ರೇಣಿ'ಯಲ್ಲಿ ವಾಡಿಕೆಯ ಕ್ರಮದಲ್ಲಿ 2005ರ ಜುಲೈ 1ರ ತರುವಾಯದಲ್ಲಿ ಆದರೆ 2006ರ ಜುಲೈ 1 ಕ್ಕಿಂತ ಮೊದಲು ಪ್ರಾಪ್ತವಾಗುತ್ತಿದ್ದಲ್ಲಿ 'ಪರಿಷ್ಕೃತ ವೇತನ ಶ್ರೇಣಿ'ಯಲ್ಲಿ ಆತನ ವೇತನವನ್ನು, ಅವನಿಗೆ ಅನುಕೂಲವಾಗುವಂತಿದ್ದರೆ, 7 ನೇ ನಿಯಮದ (1) ಮತ್ತು (3)ನೇ ಉಪ–ನಿಯಮ ಅಥವಾ (4)ನೇ ಉಪ–ನಿಯಮದ ಉಪಬಂಧಗಳಿಗೆ ಅನುಸಾರವಾಗಿ ಅಂಥ ವೇತನ ಬಡ್ತಿಯು ಪ್ರಾಪ್ತವಾಗುವ ದಿನಾಂಕದಿಂದ ಪುನ: ನಿಗದಿಪಡಿಸತಕ್ಕದ್ದು.

(2) ಈ ನಿಯಮದ (1)ನೇ ಉಪ–ನಿಯಮದ ಪರಂತುಕದ ಮೇರೆಗೆ ಸರ್ಕಾರಿ ನೌಕರನ ವೇತನವನ್ನು ಪುನ: ನಿಗದಿಗೊಳಿಸಿದಲ್ಲಿ ಅಥವಾ ಈ ನಿಯಮಗಳ 7 ನೇ ನಿಯಮದ (2)ನೇ ಉಪ–ನಿಯಮ ಅಥವಾ (8)ನೇ ಉಪ–ನಿಯಮದ ಉಪಬಂಧಗಳಿಗೆ ಅನುಸಾರವಾಗಿ ವೇತನವನ್ನು ಹೆಚ್ಚಿಸಿದಲ್ಲಿ, ಮುಂದಿನ ವೇತನ ಬಡ್ತಿಯು, ವೇತನವನ್ನು ಪುನ: ನಿಗದಿಗೊಳಿಸಿದ ಅಥವಾ ಹೆಚ್ಚಿಸಿದ ದಿನಾಂಕದಿಂದ ಒಂದು ಪೂರ್ಣ ವೇತನ ಬಡ್ತಿ ಅವಧಿಯನ್ನು ಪೂರ್ಣಗೊಳಿಸಿದ ಮೇಲೆ ಅವನಿಗೆ ಪ್ರಾಪ್ತವಾಗತಕ್ಕದ್ದು. ಈ ಉದ್ದೇಶಕ್ಕಾಗಿ ವೇತನ ಬಡ್ತಿಯ ಅವಧಿಯನ್ನು ಕರ್ನಾಟಕ ನಾಗರಿಕ ಸೇವಾ ನಿಯಮಗಳ 51 ಮತ್ತು 53ನೇ ನಿಯಮಗಳ ಉಪಬಂಧಗಳಿಗನುಸಾರವಾಗಿ ನಿರ್ಧರಿಸತಕ್ಕದ್ದು.

**9. 'ಪರಿಷ್ಕೃತ ವೇತನ ಶ್ರೇಣಿ'ಯಲ್ಲಿ ವೇತನ ನಿಗದಿಯಿಂದಾಗಿ ಹಣಕಾಸಿನ ಪ್ರಯೋಜನಕ್ಕೆ ಅರ್ಹತೆ:–** (1) 1ನೇ ಜುಲೈ 2005 ರಿಂದ 31ನೇ ಮಾರ್ಚ್ 2006ಕ್ಕೆ ಕೊನೆಗೊಳ್ಳುವ ಅವಧಿಗೆ 'ಪರಿಷ್ಕೃತ ಶ್ರೇಣಿ'ಯಲ್ಲಿನ ವೇತನ ನಿಗದಿಯಿಂದಾಗಿ ಅಥವಾ ಪುನರ್ ನಿಗದಿಯಿಂದಾಗಿ ವೇತನ ಮತ್ತು ಭತ್ಯೆಗಳ ಮತ್ತು ನಿವೃತ್ತಿ ವೇತನದ ಹೆಚ್ಚಳಕ್ಕೆ ಯಾವುದೇ ಸರ್ಕಾರಿ ನೌಕರನು ಅರ್ಹನಾಗಿರುವುದಿಲ್ಲ.

(2) 1ನೇ ಏಪ್ರಿಲ್ 2006 ರಿಂದ 31ನೇ ಮಾರ್ಚ್ 2007ಕ್ಕೆ ಕೊನೆಗೊಳ್ಳುವ ಅವಧಿಗೆ ಸರ್ಕಾರಿ ನೌಕರನಿಗೆ 'ಪರಿಷ್ಕೃತ ವೇತನ ಶ್ರೇಣಿ'ಯ ವೇತನ ನಿಗದಿಯಿಂದ ಅಥವಾ ಪುನರ್ ನಿಗದಿಯಿಂದ ವೇತನ ಮತ್ತು ಭತ್ಯೆಗಳ ಮತ್ತು ನಿವೃತ್ತಿ ವೇತನದ ಬಾಕಿಗೆ ಹಕ್ಕುಳ್ಳವನಾಗುವನೋ ಅಂತಹ ಬಾಕಿಯನ್ನು 2008–09ನೇ ಆರ್ಥಿಕ ವರ್ಷದಲ್ಲಿ ನಗದು ರೂಪದಲ್ಲಿ ಪಾವತಿಸತಕ್ಕದು.

(3) ನಿವೃತ್ತಿ ಅಥವಾ ಮರಣದಿಂದಾಗಿ ಒಬ್ಬ ಸರ್ಕಾರಿ ನೌಕರನು 2005ರ ಜುಲೈ 1 ರ ನಂತರ, ಆದರೆ 1ನೇ ಏಪ್ರಿಲ್ 2006 ಕ್ಕಿಂತ ಮುಂಚೆ ಸೇವೆಯಲ್ಲಿರುವುದು ಸಮಾಪ್ತಿಗೊಂಡರೆ, ಅವನ ಸೇವೆಯು ಸಮಾಪ್ತಿಗೊಳ್ಳುವ ದಿನಾಂಕಕ್ಕೆ ಮುಂಚಿನ ದಿನಾಂಕದಂದು 'ಪರಿಷ್ಕೃತ ವೇತನ ಶ್ರೇಣಿ'ಯಲ್ಲಿ ಪಡೆಯುತ್ತಿದ್ದ ಅವನ ವೇತನವನ್ನು –

(ಅ) ನಿವೃತ್ತಿ ವೇತನ; ಮತ್ತು

(ಆ) ಕುಟುಂಬ ವೇತನಗಳಿಗಾಗಿ

– ಅವನ ಉಪಲಬ್ದಗಳನ್ನು ಲೆಕ್ಕ ಹಾಕುವುದಕ್ಕಾಗಿ ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು. ನಿವೃತ್ತಿ ಹೊಂದಿದ ಸರ್ಕಾರಿ ನೌಕರನಿಗೆ ಅಥವಾ ಮರಣ ಹೊಂದಿದ ಸರ್ಕಾರಿ ನೌಕರನ ಫಲಾನುಭವಿಗೆ ಹಣಕಾಸಿನ ಪ್ರಯೋಜನವು ದಿನಾಂಕ 1ನೇ ಏಪ್ರಿಲ್ 2006 ರಿಂದ ಪ್ರಾಪ್ತವಾಗತಕ್ಕದ್ದು. ಆದರೆ, ದಿನಾಂಕ 1ನೇ ಏಪ್ರಿಲ್ 2006 ರಿಂದ 31ನೇ ಮಾರ್ಚ್ 2007ರವರೆಗಿನ ಅವಧಿಯ ಬಾಕಿಯನ್ನು 2008–09ನೇ ಆರ್ಥಿಕ ವರ್ಷದಲ್ಲಿ ನಗದು ರೂಪದಲ್ಲಿ ಸಂದಾಯಮಾಡತಕ್ಕದ್ದು.

**10. ಪದ ವೃಂದಗಳನ್ನು ವಿಲೀನಗೊಳಿಸುವುದು:–** ಕ್ರಮಬದ್ಧ ಶ್ರೇಣಿ ಬಡ್ತಿಯಲ್ಲಿ ಎರಡು ಬೇರೆ ಬೇರೆ ಪದ ವೃಂದಗಳಲ್ಲಿನ ಹುದ್ದೆಗಳಿಗೆ ಅನ್ವಯಿಸುವ ಪರಿಷ್ಕೃತ ವೇತನ ಶ್ರೇಣಿಗಳು ಸಮನಾಗಿದ್ದಲ್ಲಿ, ಅವುಗಳಿಗೆ ಮಾಡುವ ನೇಮಕಾತಿಯನ್ನು ಕ್ರಮಗೊಳಿಸುವ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಆ ಪದ ವೃಂದಗಳನ್ನು ವಿಲೀನಗೊಳಿಸಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಸರ್ಕಾರಿ ರಾಜ್ಯಪತ್ರದಲ್ಲಿ ಈ ನಿಯಮಗಳು ಪ್ರಕಟಗೊಂಡ ದಿನಾಂಕದಿಂದ, ಅಂಥ ಒಂದು ಪದ ವೃಂದದಿಂದ ಇನ್ನೊಂದು ಪದ ವೃಂದಕ್ಕೆ ಯಾವುದೇ ಬಡ್ತಿಯನ್ನು ನೀಡಲು ಅನುಮತಿಸತಕ್ಕದ್ದಲ್ಲ.

11. **ತೊಂದರೆಗಳನ್ನು ನಿವಾರಿಸುವ ಅಧಿಕಾರ:-** ಈ ನಿಯಮಗಳ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಸರ್ಕಾರವು, ಆದೇಶವನ್ನು ಹೊರಡಿಸುವ ಮೂಲಕ ಅಂಥ ತೊಂದರೆಗಳನ್ನು ನಿವಾರಿಸಲು ಅಗತ್ಯವೆಂದು ತನಗೆ ಕಂಡುಬರುವಂಥ ಉಪಬಂಧಗಳನ್ನು ಮಾಡಬಹುದು ಅಥವಾ ನಿರ್ದೇಶನಗಳನ್ನು ನೀಡಬಹುದು.

12. **ನಿಯಮಗಳ ಅಧ್ಯಾರೋಹಿ ಪರಿಣಾಮ:-** 1978ರ ಕರ್ನಾಟಕ ನಾಗರಿಕ ಸೇವಾ ಅಧಿನಿಯಮದ ಮೇರೆಗೆ ಅಥವಾ ಯಾವುದೇ ಕಾನೂನಿನಡಿಯಲ್ಲಿ ರಚಿಸಲ್ಪಟ್ಟ ಅಥವಾ ರಚಿಸಲಾಗಿದೆ ಎಂದು ಭಾವಿಸಲ್ಪಟ್ಟ ಯಾವುದೇ ನಿಯಮವು ಈ ನಿಯಮಗಳ ಯಾವುದೇ ಉಪಬಂಧಗಳೊಂದಿಗೆ ಅಸಂಗತವಾಗಿರುವಷ್ಟರ ಮಟ್ಟಿಗೆ ಪರಿಣಾಮಕಾರಿಯಾಗತಕ್ಕದ್ದಲ್ಲ.

13. **ನಿಯಮಗಳನ್ನು ಸಡಿಲಗೊಳಿಸುವ ಅಧಿಕಾರ:-** ಈ ನಿಯಮಗಳ ಯಾವುದೇ ಉಪಬಂಧಗಳನ್ನು ಕಾರ್ಯಗತಗೊಳಿಸುವುದರಿಂದ ಯಾವುದೇ ನಿರ್ದಿಷ್ಟ ಪ್ರಕರಣದಲ್ಲಿ ಅನುಚಿತ ತೊಂದರೆ ಉಂಟಾಗುತ್ತದೆಂದು ಸರ್ಕಾರಕ್ಕೆ ಮನದಟ್ಟಾದರೆ, ಅದು, ಆದೇಶವನ್ನು ಹೊರಡಿಸುವ ಮೂಲಕ, ಅಷ್ಟರ ಮಟ್ಟಿಗೆ ಮತ್ತು ನ್ಯಾಯಯುತವಾಗಿ ಮತ್ತು ಸಮಾನ ರೀತಿಯಲ್ಲಿ ಆ ಪ್ರಕರಣದ ಬಗ್ಗೆ ವ್ಯವಹರಿಸಲು ಅವಶ್ಯವೆಂದು ಭಾವಿಸಬಹುದಾದಂತಹ ಷರತ್ತುಗಳಿಗೊಳಪಟ್ಟು ಆ ನಿಯಮದ ಅಗತ್ಯತೆಗಳನ್ನು ವಿನಾಯತಿಗೊಳಿಸಬಹುದು ಅಥವಾ ಸಡಿಲಗೊಳಿಸಬಹುದು.

14. **ಅರ್ಥ ವಿವರಣೆ:-** ಈ ನಿಯಮಗಳ ಅರ್ಥ ವಿವರಣೆಗೆ ಸಂಬಂಧಪಟ್ಟಂತೆ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ತೀರ್ಮಾನಕ್ಕಾಗಿ ಅದನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಅದರ ತೀರ್ಮಾನವು ಅಂತಿಮವಾಗಿರತಕ್ಕದ್ದು.

15. **1983ರ ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಬಡ್ತಿ) ನಿಯಮಗಳಿಗೆ ತಿದ್ದುಪಡಿ:-** 1983ರ ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಬಡ್ತಿ) ನಿಯಮಗಳ ಅನುಸೂಚಿಗೆ ಬದಲಾಗಿ ಈ ನಿಯಮಗಳ ಎರಡನೇ ಅನುಸೂಚಿಯನ್ನು ಪ್ರತ್ಯಾಯೋಜಿಸತಕ್ಕದ್ದು.

**16. 1991ರ ಕರ್ನಾಟಕ ನಾಗರಿಕ ಸೇವಾ (ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಮುಂಬಡ್ತಿ ನೀಡುವಿಕೆ) ನಿಯಮಗಳಿಗೆ ತಿದ್ದುಪಡಿ:–** 1991ರ ಕರ್ನಾಟಕ ನಾಗರಿಕ ಸೇವಾ (ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಮುಂಬಡ್ತಿ ನೀಡುವಿಕೆ) ನಿಯಮಗಳ 1ನೇ ನಿಯಮದ (3)ನೇ ಉಪ–ನಿಯಮದ ಕೆಳಗಿನ ಕೋಷ್ಠಕದ ಬದಲಾಗಿ ಈ ನಿಯಮಗಳ ಮೂರನೇ ಅನುಸೂಚಿಯಲ್ಲಿ ಸೂಚಿಸಲಾದ ಕೋಷ್ಠಕವನ್ನು ಪ್ರತ್ಯಾಯೋಜಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ.ಆರ್.ಕಾಂಬಳೆ)
ಸರ್ಕಾರದ ಕಾರ್ಯದರ್ಶಿ (ವೆಚ್ಚ)
ಆರ್ಥಿಕ ಇಲಾಖೆ.

## ಮೊದಲನೆಯ ಅನುಸೂಚಿ

[ನಿಯಮ 4(1) ನೋಡಿ]

### ಭಾಗ – ಎ

| ಕ್ರಮ ಸಂಖ್ಯೆ | ಪ್ರಸಕ್ತ ವೇತನ ಶ್ರೇಣಿಗಳು ರೂ. | ಪರಿಷ್ಕೃತ ವೇತನ ಶ್ರೇಣಿಗಳು ರೂ. |
|---|---|---|
| **(1)** | **(2)** | **(3)** |
| 1 | 2500-50-2700-75-3450-100-3850 | 4800-100-6000-125-6500-150-7100-175-7275 |
| 2 | 2600-50-2700-75-3450-100-4350 | 5200-100-6000-125-6500-150-7100-175-7800-200-8200 |
| 3 | 2775-75-3450-100-4450-125-4950 | 5500-100-6000-125-6500-150-7100-175-7800-200-8600-225-9500 |
| 4 | 3000-75-3450-100-4450-125-5450 | 5800-100-6000-125-6500-150-7100-175-7800-200-8600-225-9500-250-10500 |
| 5 | 3300-75-3450-100-4450-125-5700-150-6300 | 6250-125-6500-150-7100-175-7800-200-8600-225-9500-250-10500-300-12000 |
| 6 | 3850-100-4450-125-5700-150-7050 | 7275-175-7800-200-8600-225-9500-250-10500-300-12300-350-13350 |
| 7 | 4150-100-4450-125-5700-150-7200-200-7800 | 8000-200-8600-225-9500-250-10500-300-12300-350-14400-400-14800 |
| 8 | 4575-125-5700-150-7200-200-8400 | 8825-225-9500-250-10500-300-12300-350-14400-400-16000 |
| 9 | 5200-125-5700-150-7200-200-8800-260-9580 | 10000-250-10500-300-12300-350-14400-400-16800-450-18150 |
| 10 | 5575-125-5700-150-7200-200-8800-260-10620 | 10800-300-12300-350-14400-400-16800-450-19500-525-20025 |
| 11 | 6000-150-7200-200-8800-260-10880-320-11200 | 11400-300-12300-350-14400-400-16800-450-19500-525-21600 |
| 12 | 6300-150-7200-200-8800-260-10880-320-11840 | 12000-300-12300-350-14400-400-16800-450-19500-525-22650 |
| 13 | 7400-200-8800-260-10880-320-13120 | 14050-350-14400-400-16800-450-19500-525-22650-600-25050 |
| 14 | 8000-200-8800-260-10880-320-13440 | 15200-400-16800-450-19500-525-22650-600-25650 |
| 15 | 9580-260-10880-320-13440-380-14200 | 18150-450-19500-525-22650-600-26250-675-26925 |
| 16 | 10620-260-10880-320-13440-380-14960 | 20025-525-22650-600-26250-675-28275 |
| 17 | 11520-320-13440-380-14960-440-15840 | 22125-525-22650-600-26250-675-30300 |
| 18 | 12800-320-13440-380-14960-440-16720 | 24450-600-26250-675-30300-750-31800 |
| 19 | 13820-380-14960-440-16720-500-17220 | 26250-675-30300-750-34800-850-36500 |
| 20 | 14960-440-16720-500-20720 | 28275-675-30300-750-34800-850-39900 |

| | |
|---|---|
| **ಭಾಗ – ಬಿ** | |
| **ದಿನಾಂಕ 1–7–2005 ರಿಂದ ಜಾರಿಗೆ ತರಲಾದ ನೂತನ ವೇತನ ಶ್ರೇಣಿಗಳು** | |
| 1 | Rs.6800-150-7100-175-7800-200-8600-225-9500-250-10500-300-12300-350-13000 |
| 2 | Rs.9500-250-10500-300-12300-350-14400-400-16800-450-17250 |
| 3 | Rs.13000-350-14400-400-16800-450-19500-525-22650-600-23850 |
| 4 | Rs.16400-400-16800-450-19500-525-22650-600-26250 |
| 5 | Rs.19050-450-19500-525-22650-600-26250-675-27600 |

## ಎರಡನೆಯ ಅನುಸೂಚಿ

[ನಿಯಮ 4(3) ಮತ್ತು 15 ನೋಡಿ]

| ಕ್ರಮ ಸಂಖ್ಯೆ | ವೇತನ ಶ್ರೇಣಿ ರೂ. | ಆಯ್ಕೆಕಾಲಿಕ ವೇತನ ಶ್ರೇಣಿ ರೂ. |
|---|---|---|
| **(1)** | **(2)** | **(3)** |
| 1 | 4800-100-6000-125-6500-150-7100-175-7275 | 5200-100-6000-125-6500-150-7100-175-7800-200-8200 |
| 2 | 5200-100-6000-125-6500-150-7100-175-7800-200-8200 | 5500-100-6000-125-6500-150-7100-175-7800-200-8600-225-9500 |
| 3 | 5500-100-6000-125-6500-150-7100-175-7800-200-8600-225-9500 | 5800-100-6000-125-6500-150-7100-175-7800-200-8600-225-9500-250-10500 |
| 4 | 5800-100-6000-125-6500-150-7100-175-7800-200-8600-225-9500-250-10500 | 6250-125-6500-150-7100-175-7800-200-8600-225-9500-250-10500-300-12000 |
| 5 | 6250-125-6500-150-7100-175-7800-200-8600-225-9500-250-10500-300-12000 | 6800-150-7100-175-7800-200-8600-225-9500-250-10500-300-12300-13000 |
| 6 | 6800-150-7100-175-7800-200-8600-225-9500-250-10500-300-12300-13000 | 7275-175-7800-200-8600-225-9500-250-10500-300-12300-350-13350 |
| 7 | 7275-175-7800-200-8600-225-9500-250-10500-300-12300-350-13350 | 8000-200-8600-225-9500-250-10500-300-12300-350-14400-400-14800 |
| 8 | 8000-200-8600-225-9500-250-10500-300-12300-350-14400-400-14800 | 8825-225-9500-250-10500-300-12300-350-14400-400-16000 |
| 9 | 8825-225-9500-250-10500-300-12300-350-14400-400-16000 | 9500-250-10500-300-12300-350-14400-400-16800-450-17250 |
| 10 | 9500-250-10500-300-12300-350-14400-400-16800-450-17250 | 10000-250-10500-300-12300-350-14400-400-16800-450-18150 |
| 11 | 10000-250-10500-300-12300-350-14400-400-16800-450-18150 | 10800-300-12300-350-14400-400-16800-450-19500-525-20025 |
| 12 | 10800-300-12300-350-14400-400-16800-450-19500-525-20025 | 11400-300-12300-350-14400-400-16800-450-19500-525-21600 |
| 13 | 11400-300-12300-350-14400-400-16800-450-19500-525-21600 | 12000-300-12300-350-14400-400-16800-450-19500-525-22650 |
| 14 | 12000-300-12300-350-14400-400-16800-450-19500-525-22650 | 13000-350-14400-400-16800-450-19500-525-22650-600-23850 |

## ಮೂರನೆಯ ಅನುಸೂಚಿ

**[ನಿಯಮ 16 ನೋಡಿ]**

**ಕೋಷ್ಟಕ**

| ಕ್ರಮ ಸಂಖ್ಯೆ | ವೇತನ ಶ್ರೇಣಿ | ಆಯ್ಕೆಕಾಲಿಕ ವೇತನ ಶ್ರೇಣಿ |
|---|---|---|
| | ರೂ. | ರೂ. |
| **(1)** | **(2)** | **(3)** |
| 1 | 4800-7275 | 5200-8200 |
| 2 | 5200-8200 | 5500-9500 |
| 3 | 5500-9500 | 5800-10500 |
| 4 | 5800-10500 | 6250-12000 |
| 5 | 6250-12000 | 6800-13000 |
| 6 | 6800-13000 | 7275-13350 |
| 7 | 7275-13350 | 8000-14800 |
| 8 | 8000-14800 | 8825-16000 |
| 9 | 8825-16000 | 9500-17250 |
| 10 | 9500-17250 | 10000-18150 |
| 11 | 10000-18150 | 10800-20025 |
| 12 | 10800-20025 | 11400-21600 |
| 13 | 11400-21600 | 12000-22650 |
| 14 | 12000-22650 | 13000-23850 |

## GOVERNMENT OF KARNATAKA

No. FD 17 SRP 2007.

Karnataka Government Secretariat.
Vidhana Soudha,
Bangalore, dated: 16th May 2007.

## NOTIFICATION

In exercise of the powers conferred by sub-section (1) of section 3, read with the proviso to sub-section (2) of the said section of the Karnataka State Civil Services Act, 1978 (Karnataka Act No.14 of 1990), the Government of Karnataka hereby makes the following rules, namely;

1. **Short title and commencement:-** (1) These rules may be called the Karnataka Civil Services (Revised Pay) Rules, 2007.

(2) They shall be deemed to have come into force from the first day of July, 2005.

2. **Application:-** (1) Save as otherwise provided by or under these rules, these rules shall apply to persons appointed to civil services and posts in connection with the affairs of the State of Karnataka.

(2) These rules shall not apply to:-

(a) persons borne on work charged establishments, with no lien on any post in regular establishments of civil services, unless otherwise provided by an order issued by the Government;

(b) persons paid out of contingencies, unless otherwise provided by an order issued by the Government;

(c) persons paid on hourly, daily, weekly or monthly rates wages;

(d) persons not in whole-time employment;

(e) persons paid only on a piece rate basis;

(f) persons employed on contract, except where the contract provides otherwise;

(g) persons appointed on consolidated pay or salary;

(h) persons reemployed in Government service after retirement.

(i) persons whose conditions of service are regulated by the rules made under clause (3) of Article 187, clause (2) of Article 229 or sub-clause (b) of Article 318 of the Constitution of India;

(j) persons drawing pay in the UGC/AICTE/ICAR scales of pay;

(k) persons borne on All India Services working under the Government;

(l) the State Judicial Officers drawing First National Judicial Pay Commission scales of pay; and

(m) any other class or category of persons whom the Government may, by order, specifically exclude from the operation of all or any of the provisions of these rules.

3. **Definitions:-** In these rules, unless the context otherwise requires, _

(a) 'basic pay' means pay of a Government servant in the 'existing scale' as on 1st July 2005 or any subsequent date with effect from which his pay is re-fixed in the 'revised scale' and includes the following, namely:-

(i) annual increment;

(ii) stagnation increment granted above the maximum of the 'existing scale';

(iii) personal pay granted under sub-rule (3) of rule 7 of the Karnataka Civil Services (Revised Pay) Rules, 1999; and

(iv) additional increment granted beyond the maximum of the time scale of pay in terms of G.O. No.FD 13 SRP 2002 dated 9th May 2002.

Provided that it shall not include the following namely:-

(i) special allowance;

(ii) personal pay other than that mentioned at (iii) above;

(iii) technical pay; and

(iv) any other emoluments specially classed as pay by the Government under rule 8(32) of the Karnataka Civil Services Rules.

(b) 'existing scale' in relation to a Government servant means the '1999 scale' applicable to the post held by him as on 1st July 2005, whether in a substantive or officiating or temporary capacity and includes the personal scale, if any, applicable to him in respect of the said post and the 'existing selection time scale' or 'existing senior scale of pay' as the case may be, if any, granted to him in respect of the said post;

(c) 'existing selection time scale of pay' in relation to a Government servant holding a post means the selection time scale of pay granted to him prior to 1st July 2005, in respect of the said post, in accordance

with the provisions of the Karnataka Civil Services (Time Bound Advancement) Rules, 1983, as amended from time to time;

(d) 'existing senior scale of pay' in relation to a Government servant holding a post means senior scale of pay granted to him prior to 1st July 2005 in respect of the said post in accordance with the provisions of the Karnataka Civil Services (Automatic Grant of Special Promotion to Senior Scale of Pay) Rules, 1991, as amended from time to time;

(e) 'Government' means the Government of Karnataka;

(f) '1999 scale' in relation to a post means the scale of pay prescribed by or under the Karnataka Civil Services (Revised Pay) Rules, 1999;

(g) 'revised scale' in relation to a post means the scale of pay specified in column (3) of Part-A of the First Schedule against the 'existing scale' applicable thereto, as specified in column 2 thereof, unless a different 'revised scale' is notified separately for that post under sub-rule (2) of rule 4 and includes 'revised selection time scale' and 'revised senior scale of pay', if any, prescribed for the post;

(h) 'revised selection time scale of pay' in relation to a Government servant holding a post means the selection time scale of pay prescribed by sub-rule (3) of rule 4;

(i) 'revised senior scale of pay' in relation to a Government servant holding a post means the senior scale of pay prescribed by sub-rule (4) of rule 4;

(j) 'Schedule' means a Schedule annexed to these rules;

(k) 'Table' means a Table annexed to these rules.

4. **Scale of pay of posts:-** (1) Subject to the provisions of sub-rules (2), (3) and (4), the scale of pay applicable to any post, as from the date of commencement of these rules, shall be the 'revised scale' specified in column (3) of Part-A of the First Schedule against the 'existing scale' specified in column (2) applicable thereto. There shall be five new pay scales as specified in Part-B of the First Schedule with effect from 1st July 2005.

(2) The Government may, by notification in the official gazette, sanction to any post a 'revised scale' other than that specified in the corresponding entry in column (3) of Part-A of the First Schedule with effect from 1st July 2005 or such subsequent date, as may be considered appropriate.

(3) As from the date of commencement of these rules, the selection time scale of pay in relation to a Government servant holding a post, as admissible in accordance with the provisions of the Karnataka Civil Services (Time Bound Advancement) Rules, 1983, as modified from time to time, shall be the 'revised selection time scale of pay' specified in column (3) of the Second Schedule against the 'revised scale' applicable to the post as specified in column (2) thereof:

Provided that on account of introduction of five new pay scales, if a Government servant holding a post carrying the scale of pay under the Karnataka Civil Services (Revised Pay) Rules, 1999 has been allowed the selection time scale of pay, prior to 1st July 2005, which is higher than the corresponding revised selection time scale of pay applicable to him under

the Karnataka Civil Services (Time Bound Advancement) Rules, 1983, such revised scale of pay shall be allowed to him as personal to him.

(4) As from the date of commencement of these rules, the senior scale of pay in relation to a Government servant holding a post, as admissible in accordance with the provisions of the Karnataka Civil Services (Automatic Grant of Special Promotion to Senior scale of pay) Rules, 1991, as amended from time to time, shall be the 'revised scale' next above the 'revised selection time scale of pay' granted under the Karnataka Civil Services (Time Bound Advancement) Rules, 1983 in respect of the post held by a Government servant or where the 'revised selection time scale of pay' granted under the Karnataka Civil Services (Time Bound Advancement) Rules, 1983 in respect of the post held by the Government servant and the 'revised scale' of promotional post is identical or the same, the 'revised scale' of such promotional post.

5. **Drawal of pay in the 'revised scale':-** Save as otherwise provided in these rules, a Government servant shall draw pay in the 'revised scale' applicable to the post to which he is appointed.

6. **Application of 'revised scale':-** Subject to the other provisions of these rules, 'revised scale' shall apply to -

(a) a Government servant who entered service prior to 1st July 2005 and was in service on that date;

(b) a Government servant who has been granted an 'existing selection time scale' prior to 1st July 2005;

(c) a Government servant who has been granted an 'existing senior scale' prior to 1st July 2005;

(d) a Government servant who has either entered service or is promoted or appointed to any post other than that held by him prior to 1st July 2005 on or after 1st July 2005;

(e) a Government servant who may be granted 'revised selection time scale' on or after 1st July 2005; and

(f) a Government servant who may be granted 'revised senior scale' on or after 1st July 2005.

7. **Fixation of initial pay in the 'revised scale':-** (1) The initial pay of a Government servant referred to in clauses (a), (b) and (c) of rule 6 shall, unless the Government by a special order otherwise direct, be fixed in the 'revised scale' applicable to him separately:-

(a) in respect of the post held by him as on 1st July 2005; and

(b) in respect of the lower post, if any, which he would have held on that date but for his holding the higher post on officiating basis.

(2) The initial pay shall be fixed at the stage specified in column (2) of the Fourth Schedule corresponding to his 'basic pay' in the 'existing scale' appearing in column (1) thereof.

(3) The personal pay specified in column (2) of the Fourth Schedule shall count as pay for all purposes including fixation of pay on promotion.

(4) If the 'basic pay' of a Government servant does not appear in column (1) of the Fourth Schedule, such a case shall be referred to the Government for orders.

(5) (a) Where a Government servant has entered service on or after 1st July 2005, his pay shall be fixed in the 'revised scale' applicable to the post to which he is appointed in accordance with the provisions of the Karnataka Civil Services Rules.

(b) Where a Government servant has been promoted or appointed on or after 1st July 2005 to any post other than that held by him prior to that date, his pay shall be fixed in the 'revised scale' applicable to the post held by him prior to 1st July 2005 in accordance with the provisions of sub-rules (1) to (4) of this rule and thereafter, on the basis of the pay so fixed, his pay shall be fixed in the scale of pay applicable to the post to which he has been promoted or appointed, in accordance with the provisions of the Karnataka Civil Services Rules.

(6) Where a Government servant has been granted 'selection time scale of pay' or the 'senior scale of pay' on or after 1st July 2005, his pay in the 'revised scale' applicable to the post held by him shall be fixed in accordance with the provisions of sub-rules (1) to (4) of this rule and thereafter, on the basis of the pay so fixed, his pay shall be fixed in the selection time scale of pay or senior scale of pay, as the case may be, in accordance with Rule 4 of the Karnataka Civil Services (Time Bound Advancement) Rules, 1983 or Rule 7 of the Karnataka Civil Services

(Automatic Grant of Special Promotion to Senior Scale of Pay) Rules, 1991 respectively.

(7) Where in the fixation of pay under sub-rule (2) or sub-rule (4) of this rule, the pay of a Government servant, who in the 'existing scale' was drawing immediately before 1st July 2005 more pay than another Government servant junior to him in the same cadre, gets fixed in the revised scale at a stage lower than that of such junior, his pay shall be stepped up to the same stage in the 'revised scale' as that of the junior.

(8) Where a senior Government servant promoted to a higher post before 1st July 2005 draws less pay in the 'revised scale' than his junior who is promoted to the higher post on or after 1st July 2005, the pay of the senior Government servant shall be stepped up to an amount equal to the pay fixed for his junior in the higher post. This stepping up of pay shall be done with effect from the date of promotion of the junior Government servant, subject to fulfillment of the following conditions, namely:-

(a) both the senior and the junior Government servants should, before their promotion, belong to the same cadre and the posts to which they have been promoted belong to the same cadre;
(b) the 'existing scale' and the 'revised scale' of the lower and higher posts in which they are entitled to draw pay are identical;
(c) the junior Government servant was not drawing more pay in the 'existing scale' than the senior Government servant in the lower post; and

(d) the anomaly is the direct result of the application of the Karnataka Civil Services Rules or any other rules or orders regulating pay fixation on such promotion in the ‘revised scale’.

8. **Date of next increment in the ‘revised scale’:-** (1) After the initial pay of a Government servant in the ‘revised scale’ is fixed with effect from 1st July 2005, in accordance with the provisions of sub-rules (1) to (4) of rule 7, the next increment therein shall accrue on the date on which it would have accrued to him in the ‘existing scale’ had he continued in the ‘existing scale’ and any stagnation increment due and admissible to him under the rules or by general or special orders issued by the Government shall be granted in the ‘revised scale’ in accordance with the said rules or orders.

Provided that where an increment/stagnation increment would have accrued to a Government servant in the ‘existing scale’ in the usual course subsequent to 1st July 2005 but before 1st July 2006, his pay in the ‘revised scale’ shall, if advantageous to him, be re-fixed from the date of accrual of such increment in accordance with the provisions of sub-rules (1) to (3) or sub-rule (4) of rule 7 of these rules.

(2) Where the pay of a Government servant is re-fixed under the proviso to sub-rule (1) of this rule or is stepped up in accordance with the provisions of sub-rule (7) or sub-rule (8) of rule 7 of these rules, the next increment shall accrue to him on completion of one full incremental period from the date of the re-fixation or stepping up of the pay. The incremental

period for this purpose shall be determined in accordance with the provisions of Rules 51 and 53 of the Karnataka Civil Services Rules.

9. **Entitlement to monetary benefits due to fixation of pay in the 'revised scale':-** (1) No Government servant shall be entitled to any increase in pay and allowances and pension as a result of fixation or re-fixation of his pay in the 'revised scale' for the period commencing from 1st July 2005 and ending with 31st March 2006.

(2) The arrears of pay and allowances and pension to which a Government servant is entitled, for the period commencing from 1st April 2006 and ending with 31st March 2007, as a result of fixation or re-fixation of his pay in the 'revised scale' shall be payable in the financial year 2008-09.

(3) If, on account of retirement or death, a Government servant ceases to be in service after 1st July 2005, but before 1st April 2006, his pay in the 'revised scale' on the date preceding the date of his cessation from the service shall count for computing his emoluments for –

(a) pension, and
(b) family pension.

The monetary benefit shall, however, accrue to the retired Government servant or the beneficiary of the deceased Government servant with effect from 1st April 2006, but the arrears for the period from 1st April 2006 to 31st March 2007 shall be paid in cash in the financial year 2008-09.

10. **Amalgamation of cadres:-** Where the ‘revised scale’ of pay applicable to posts in two different cadres in the hierarchical line of promotion is the same, notwithstanding anything contained in the rules regulating recruitment thereto, the cadre shall be deemed to have been amalgamated and no promotion shall be permissible from one such cadre to the other as from the date of publication of these rules in the official gazette.

11. **Power to remove difficulties:-** If any difficulty arises in giving effect to the provisions of these rules, the Government may, by order, make such provisions or give such directions as appear to them to be necessary for removing the difficulty.

12. **Over-riding effect of the rules:-** No rule made or deemed to have been made under the Karnataka Civil Services Act, 1978 or a rule made under any other law shall, in so far as it is inconsistent with any of the provisions of these rules, have any effect.

13. **Power to relax:-** Where the Government are satisfied that the operation of any of the provisions of these rules causes undue hardship in any particular case, it may, by order, dispense with or relax the requirements of that rule to such extent and subject to such conditions as may be considered necessary for dealing with the case in a just and equitable manner.

14. **Interpretation:-** If any question arises relating to the interpretation of these rules, it shall be referred to the Government whose decision thereon shall be final.

15. **Amendment to the Karnataka Civil Services (Time Bound Advancement) Rules, 1983:-** For the Schedule to the Karnataka Civil Services (Time Bound Advancement) Rules, 1983, the **Second Schedule** to these rules shall be substituted.

16. **Amendment to the Karnataka Civil Services (Automatic Grant of Special Promotion to Senior Scale of Pay) Rules, 1991**:- For the Table below sub-rule (3) of rule 1 of the Karnataka Civil Services (Automatic Grant of Special Promotion to Senior Scale of Pay) Rules, 1991, the Table specified in the **Third Schedule** to these rules shall be substituted.

By Order and in the name of the
Governor of Karnataka

(M.R.KAMBLE)
Secretary to Government (Exp.)
Finance Department

# FIRST SCHEDULE

[See Rule 4(1)]

## PART-A

| Sl. No. | Existing scales of pay Rs. | Revised scales of pay Rs. |
|---|---|---|
| (1) | (2) | (3) |
| 1 | 2500-50-2700-75-3450-100-3850 | 4800-100-6000-125-6500-150-7100-175-7275 |
| 2 | 2600-50-2700-75-3450-100-4350 | 5200-100-6000-125-6500-150-7100-175-7800-200-8200 |
| 3 | 2775-75-3450-100-4450-125-4950 | 5500-100-6000-125-6500-150-7100-175-7800-200-8600-225-9500 |
| 4 | 3000-75-3450-100-4450-125-5450 | 5800-100-6000-125-6500-150-7100-175-7800-200-8600-225-9500-250-10500 |
| 5 | 3300-75-3450-100-4450-125-5700-150-6300 | 6250-125-6500-150-7100-175-7800-200-8600-225-9500-250-10500-300-12000 |
| 6 | 3850-100-4450-125-5700-150-7050 | 7275-175-7800-200-8600-225-9500-250-10500-300-12300-350-13350 |
| 7 | 4150-100-4450-125-5700-150-7200-200-7800 | 8000-200-8600-225-9500-250-10500-300-12300-350-14400-400-14800 |
| 8 | 4575-125-5700-150-7200-200-8400 | 8825-225-9500-250-10500-300-12300-350-14400-400-16000 |
| 9 | 5200-125-5700-150-7200-200-8800-260-9580 | 10000-250-10500-300-12300-350-14400-400-16800-450-18150 |
| 10 | 5575-125-5700-150-7200-200-8800-260-10620 | 10800-300-12300-350-14400-400-16800-450-19500-525-20025 |
| 11 | 6000-150-7200-200-8800-260-10880-320-11200 | 11400-300-12300-350-14400-400-16800-450-19500-525-21600 |
| 12 | 6300-150-7200-200-8800-260-10880-320-11840 | 12000-300-12300-350-14400-400-16800-450-19500-525-22650 |
| 13 | 7400-200-8800-260-10880-320-13120 | 14050-350-14400-400-16800-450-19500-525-22650-600-25050 |
| 14 | 8000-200-8800-260-10880-320-13440 | 15200-400-16800-450-19500-525-22650-600-25650 |
| 15 | 9580-260-10880-320-13440-380-14200 | 18150-450-19500-525-22650-600-26250-675-26925 |
| 16 | 10620-260-10880-320-13440-380-14960 | 20025-525-22650-600-26250-675-28275 |
| 17 | 11520-320-13440-380-14960-440-15840 | 22125-525-22650-600-26250-675-30300 |
| 18 | 12800-320-13440-380-14960-440-16720 | 24450-600-26250-675-30300-750-31800 |
| 19 | 13820-380-14960-440-16720-500-17220 | 26250-675-30300-750-34800-850-36500 |
| 20 | 14960-440-16720-500-20720 | 28275-675-30300-750-34800-850-39900 |

## PART – B

**New scales of pay introduced with effect from 1-7-2005**

| | |
|---|---|
| 1 | Rs.6800-150-7100-175-7800-200-8600-225-9500-250-10500-300-12300-350-13000 |
| 2 | Rs.9500-250-10500-300-12300-350-14400-400-16800-450-17250 |
| 3 | Rs.13000-350-14400-400-16800-450-19500-525-22650-600-23850 |
| 4 | Rs.16400-400-16800-450-19500-525-22650-600-26250 |
| 5 | Rs.19050-450-19500-525-22650-600-26250-675-27600 |

# SECOND SCHEDULE

[See Rule 4(3) and 15]

| Sl. No. | Scale of pay | Selection time scale of pay |
|---|---|---|
| | Rs. | Rs. |
| (1) | (2) | (3) |
| 1 | 4800-100-6000-125-6500-150-7100-175-7275 | 5200-100-6000-125-6500-150-7100-175-7800-200-8200 |
| 2 | 5200-100-6000-125-6500-150-7100-175-7800-200-8200 | 5500-100-6000-125-6500-150-7100-175-7800-200-8600-225-9500 |
| 3 | 5500-100-6000-125-6500-150-7100-175-7800-200-8600-225-9500 | 5800-100-6000-125-6500-150-7100-175-7800-200-8600-225-9500-250-10500 |
| 4 | 5800-100-6000-125-6500-150-7100-175-7800-200-8600-225-9500-250-10500 | 6250-125-6500-150-7100-175-7800-200-8600-225-9500-250-10500-300-12000 |
| 5 | 6250-125-6500-150-7100-175-7800-200-8600-225-9500-250-10500-300-12000 | 6800-150-7100-175-7800-200-8600-225-9500-250-10500-300-12300-13000 |
| 6 | 6800-150-7100-175-7800-200-8600-225-9500-250-10500-300-12300-13000 | 7275-175-7800-200-8600-225-9500-250-10500-300-12300-350-13350 |
| 7 | 7275-175-7800-200-8600-225-9500-250-10500-300-12300-350-13350 | 8000-200-8600-225-9500-250-10500-300-12300-350-14400-400-14800 |
| 8 | 8000-200-8600-225-9500-250-10500-300-12300-350-14400-400-14800 | 8825-225-9500-250-10500-300-12300-350-14400-400-16000 |
| 9 | 8825-225-9500-250-10500-300-12300-350-14400-400-16000 | 9500-250-10500-300-12300-350-14400-400-16800-450-17250 |
| 10 | 9500-250-10500-300-12300-350-14400-400-16800-450-17250 | 10000-250-10500-300-12300-350-14400-400-16800-450-18150 |
| 11 | 10000-250-10500-300-12300-350-14400-400-16800-450-18150 | 10800-300-12300-350-14400-400-16800-450-19500-525-20025 |
| 12 | 10800-300-12300-350-14400-400-16800-450-19500-525-20025 | 11400-300-12300-350-14400-400-16800-450-19500-525-21600 |
| 13 | 11400-300-12300-350-14400-400-16800-450-19500-525-21600 | 12000-300-12300-350-14400-400-16800-450-19500-525-22650 |
| 14 | 12000-300-12300-350-14400-400-16800-450-19500-525-22650 | 13000-350-14400-400-16800-450-19500-525-22650-600-23850 |

## THIRD SCHEDULE

[See Rule 16]

## TABLE

| Sl. No. | Scale of pay | Selection time scale of pay |
|---|---|---|
| | Rs. | Rs. |
| (1) | (2) | (3) |
| 1 | 4800-7275 | 5200-8200 |
| 2 | 5200-8200 | 5500-9500 |
| 3 | 5500-9500 | 5800-10500 |
| 4 | 5800-10500 | 6250-12000 |
| 5 | 6250-12000 | 6800-13000 |
| 6 | 6800-13000 | 7275-13350 |
| 7 | 7275-13350 | 8000-14800 |
| 8 | 8000-14800 | 8825-16000 |
| 9 | 8825-16000 | 9500-17250 |
| 10 | 9500-17250 | 10000-18150 |
| 11 | 10000-18150 | 10800-20025 |
| 12 | 10800-20025 | 11400-21600 |
| 13 | 11400-21600 | 12000-22650 |
| 14 | 12000-22650 | 13000-23850 |